**ಸಾಕ್ಷಿಗೆ ದಿನಾಂಕ 23.12.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

2023 ರ ಮೊದಲು ನಾನು ವ್ಯವಸಾಯ ಮಾಡುತ್ತಿದ್ದೇ. ನನಗೆ ಸ್ವಂತ ಜಮೀನು ಇರುತ್ತದೆ ಹಾಗೂ ಬೇರೆಯವರ ಜಮೀನಿನ್ನೂ ಸಹ ದೇಣಿಗೆ ಪಡೆದು ವ್ಯವಸಾಯ ಮಾಡುತ್ತೇನೆ. ನನ್ನ ವಾರ್ಷಿಕ ಆದಾಯ ಸುಮಾರು 1.5 ರಿಂದ 2 ಲಕ್ಷದ ವರೆಗೂ ಇರುತ್ತದೆ. ಮಳೆ ಚೆನ್ನಾಗಿ ಬರೆದ ಇದ್ದ ಪಕ್ಷದಲ್ಲಿ ಕೃಷಿಯಿಂದ ಆದಾಯ ಬರುವುದಿಲ್ಲ ಆದರೆ ನನ್ನ ಬಳಿ ಕುರಿ ಹಾಗೂ ಹಸು ಸಾಕಾಣಿಕೆ ಇದ್ದು ಅವುಗಳಿಂದ ಆದಾಯ ಬರುತ್ತದೆ. ನನಗೆ ಎಷ್ಟು ಆದಾಯ ಬರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ನಾನು ಕುರಿ ಸಾಕಾಣಿಕೆ ಮಾಡುತ್ತಿರುವ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ. 2022 ರ ಜುಲೈ ತಿಂಗಳ 17 ನೇ ತಾರೀಖಿನಂದು ಆರೋಪಿಯು ಹಣವನ್ನು ಕೇಳಿರುತ್ತಾರೆ. ನಿಪಿ-1 ರಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರವಣಿಗೆ ಇದ್ದು ಎರಡು ರೀತಿಯ ಬೇರೆ ಬೇರೆ ಬರವಣಿಗೆ ಇರುತ್ತದೆ ಎಂದರೆ ಗೊತ್ತಿರುವುದಿಲ್ಲ. ನಿಪಿ-1 ನ್ನು ಆರೋಪಿಯೆ ಬರೆದು ಕೊಟ್ಟಿರುತ್ತಾರೆ.

ಕನ್ನಡ ಓದಲು, ಬರೆಯಲು ಮಾತ್ರ ಬರುತ್ತದೆ. ಆಂಗ್ಲ ಭಾಷೆ ಬರುವುದಿಲ್ಲ. ದೂರಿನಲ್ಲಿ ನಾನೇ ಸಹಿ ಮಾಡಿರುತ್ತೇನೆ. ಚೆಕ್ಕಿಗೆ ನಾನು ಸಹಿಯನ್ನು ಮಾಡಿ ನಗದೀಕರಿಸಲು ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ಸಹಿಗೆ ನಾನು ಸಹಿಯನ್ನು ಮಾಡಿರುವುದಿಲ್ಲ ನಗದೀಕರಣಕ್ಕೆ ಮಾತ್ರ ಸಲ್ಲಿಸಿರುತ್ತೇನೆ. ಆರೋಪಿಗೆ ಹಣ ನೀಡುವ ಸಮಯದಲ್ಲಿ ಚೆಕ್ಕನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳಲ್ಲಿ ಅವರ ಸಹಿಯನ್ನು ಪಡೆದಿರುವುದಿಲ್ಲ. ನನ್ನ ಬಳಿ ಹಣ ಕೇಳಲು ಆರೋಪಿ ಮತ್ತು ಅವರು ಹೆಂಡತಿ ಇಬ್ಬರೂ ಸಹ ಬಂದಿದ್ದರು.

ಆರೋಪಿಯ ಹೆಂಡತಿಯ ವಿರುದ್ದ ಚೆಕ್ಕ ಬೌನ್ಸ ಪ್ರಕರಣವನ್ನು ಹೂಡಿರುತ್ತೇನೆಂದರೆ ಸರಿ. ಗಂಡ-ಹೆಂಡತಿ ಇಬ್ಬರಿಗೂ ಸಹ ತೊಂದರೆ ಕೊಡುವ ಉದ್ದೇಶದಿಂದ ಪ್ರಕರಣವನ್ನು ಅವರ ವಿರುದ್ದ ಹೂಡಿರುತ್ತೇನೆಂದರೆ ಸರಿಯಲ್ಲ. ಆರೋಪಿಯ ಹೆಂಡತಿ ತಂಗಿಯಾಗಿರುವ ಕಾರಣಕ್ಕೆ ಮನೆಗೆ ಹೋಗಿ ಬಂದು ಮಾಡುತ್ತೀರುತ್ತೇನೆ. ಆರೋಪಿಯ ಚೆಕ್ಕನ್ನು ಅವರ ಮನೆಗೆ ಹೋದ ಸಮಯದಲ್ಲಿ ಅದನ್ನು ತೆಗೆದುಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**